ಓ.ಎಸ್ಃ 240 /2015

ಪಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 10.07.2018 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ CRS ವಕೀಲರಿಂದ</u>**

ದಾವಾ ಆಸ್ತಿಯನ್ನು ಶಾರದಮ್ಮ ನವರು ಲಕ್ಷ್ಮಮ್ಮನವರಿಂದ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದು ದಾವೆಯಲ್ಲಿ ಹೇಳಿದ್ದು ಲಕ್ಷ್ಮಮ್ಮ ನವರಿಗೆ ಪುರಸಭೆಯಲ್ಲಿ ಖಾತೆ ಇದ್ದ ಬಗ್ಗೆ ದಾಖಲೆಗಳನ್ನು ನೋಡಿಲ್ಲ. ಶಾರದಮ್ಮ ನವರ ಹೆಸರಿನಲ್ಲಿ ಪುರಸಭೆಯಲ್ಲಿ ಖಾತೆ ಇದ್ದ ಬಗ್ಗೆ ಪರಿಶೀಲನೆ ಮಾಡಿದ್ದೇನೆ. ಸದರಿ ದಾಖಲೆಗಳನ್ನು ಹಾಜರುಮಾಡಿದ್ದೇನೆ. ಲಕ್ಷ್ಮಮ್ಮನವರಿಗೆ ದಾವಾ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ಗೊತ್ತಿಲ್ಲ. ಅದೇ ರೀತಿ ಆ ಬಗ್ಗೆ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮಾರೀಗುಡಿ ರಸ್ತೆ , ಪಶ್ಚಿಮಕ್ಕೆ ಸಿದ್ದಪ್ಪ ನಿಂಗರಾಜಮ್ಮ ನವರ ಮನೆ ಆ ನಂತರ ರಸ್ತೆ ಇದೆ , ಉತ್ತರಕ್ಕೆ ರಸ್ತೆ , ದಕ್ಷಿಣಕ್ಕೆ ಸೈಟು ಮತ್ತು ರಸ್ತೆ. ಪ್ರತಿವಾದಿಯ ಮನೆ ಮತ್ತು ಖಾಲಿ ಜಾಗವನ್ನು ನೋಡಿರುತ್ತೀರಾ ಎಂದರೆ ಮನೆ ನೋಡಿದ್ದೇನೆ ಅವರಿಗೆ ಖಾಲಿ ಜಾಗ ಇಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಇರುವ ವ್ಯಕ್ತಿ ಪ್ರತಿವಾದಿಯ ಗಂಡ ಎಂದರೆ ಹೌದು. ಅದರಲ್ಲಿ ಕಾಣಿಸುವ ನಾಡ ಹೆಂಚಿನ ಮನೆ ಪ್ರತಿವಾದಿಯ ಮನೆ ಎಂದರೆ ಹೌದು. ಸದರಿ ಮನೆಯ ಮುಂಭಾಗದಲ್ಲಿ ಇರುವ ಖಾಲಿ ಜಾಗ ಮನ್ಸಿಪಾಲಿಟಿಗೆ ಸೇರಿರಬಹುದು. ಸಾಕ್ಷಿಯು ಸದರಿ ಫೋಟೋವನ್ನು ನೋಡಿ

ಗುರುತಿಸಿದ ಕಾರಣ ನಿಡಿ 1 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿನ ಆರ್.ಸಿ.ಸಿ ಮನೆ ನಮ್ಮ ಬಾವ ಸಿದ್ದಯ್ಯ ನವರ ಮನೆ ಎಂದರೆ ಹೌದು. ಸದರಿ ಮನೆಯ ಮುಂಭಾಗದ ಜಾಗ ಯಾರದ್ದು ಎಂದರೆ ಅದು ಮನ್ಸಿಪಾಲಿಟಿ ರಸ್ತೆ. ಸದರಿ ರಸ್ತೆ ಎಷ್ಟು ಅಡಿ ಅಗಲ ಮತ್ತು ಉದ್ದ ಇದೆ ಎಂದು ಗೊತ್ತಿಲ್ಲ. ಪುರಸಭೆ ರಸ್ತೆ ಇರುವ ಬಗ್ಗೆ ದಾಖಲೆ ಹಾಜರುಮಾಡಿರಬಹುದು. ನಾನು ನಿವೇಶನ ಖರೀದಿಸುವಾಗ ಪುರಸಭೆಯವರು ಸ್ಥಳ ಪರಿಶೀಲನೆ ಮಾಡಿ ಮಹಜರ್ ಮತ್ತು ನಕ್ಷೆಯನ್ನು ತಯಾರಿಸಿದ್ದಾರೆ. ಸದರಿ ದಾಖಲೆಗಳನ್ನು ಹಾಜರುಮಾಡಿದ್ದೇನೆ. ಸಾಕ್ಷಿಗೆ ಮತ್ತೊಂದು ಫೋಟೋ ತೋರಿಸಿ ಅದರಲ್ಲಿ ನಿಮ್ಮ ನಿವೇಶನ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಆರ್.ಸಿ.ಸಿ ಮನೆಯಲ್ಲಿ ಕಾಣುವ ಕಿಟಕಿಯ ನೇರ ಸ್ವಲ್ಪ ಮುಂಭಾಗದಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಡಿ 2 ಎಂದು ಗುರುತಿಸಲಾಯಿತು. ನಮ್ಮ ನಿವೇಶನದ ನಂತರ ಮನ್ಸಿಪಾಲಿಟಿ ಜಾಗ ನಂತರ ಗುಂಬಾಜ್ ಮುಖ್ಯ ರಸ್ತೆ ಇದೆ. ಸದರಿ ರಸ್ತೆಯನ್ನು ಹೊರತು ಪಡಿಸಿ ನನ್ನ ನಿವೇಶನಕ್ಕೆ ಯಾವುದೇ ದಿಕ್ಕಿನಲ್ಲಿಯೂ ರಸ್ತೆ ಬರುವುದಿಲ್ಲ. ಸದರಿ ರಸ್ತೆ ನನ್ನ ನಿವೇಶನದ ದಕ್ಷಿಣ ಭಾಗಕ್ಕೆ ಇದೆ ಎಂದರೆ ಹೌದು. ಪ್ರತಿವಾದಿಗೆ ಸೇರಿದ ಮನೆ ಮತ್ತು ಜಾಗದ ಚೆಕ್ಕುಬಂದಿ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಅವರಿಗೆ ಯಾವುದೇ ಜಾಗ ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ರ ಫೋಟೋದಲ್ಲಿ ಕಾಣುವ ಪ್ರತಿವಾದಿ ಮನೆಯ ಮುಂಭಾಗದಲ್ಲಿ ಸೀತಮ್ಮ ಎಂಬುವವರಿಗೆ ಸೇರಿದ ಸಣ್ಣ ಒಂದು ಮನೆ ಇದ್ದು ಉಳಿಕೆ ಖಾಲಿ ಜಾಗ

ಬಿಟ್ಟುಕೊಂಡಿದ್ದಾರೆ. ಅದರ ಚೆಕ್ಕುಬಂದಿ ಮತ್ತು ವಿಸ್ತೀರ್ಣ ಗೊತ್ತಿಲ್ಲ. ಪ್ರತಿವಾದಿ ಎಷ್ಟು ವಿಸ್ತೀರ್ಣ ದ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಅದೇ ರೀತಿ ಅವರು ಏನೇನು ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. ಅದೇ ರೀತಿ ಅವರ ಕ್ರಯ ಪತ್ರದ ವಿಚಾರವನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿ ದಿನಾಂಕ 24.10.1983 ರಂದು ಆಸ್ತಿ ಖರೀದಿಸಿರುವ ವಿಚಾರವನ್ನು ನಾನು ನನ್ನ ವಕೀಲರಿಗೆ ಹೇಳಿರುವುದಿಲ್ಲ. ಚನ್ನಪ್ಪನವರು 1951 ರಂದು ಮರಣ ಶಾಸನ ಪತ್ರ ಬರೆದಿರುವ ವಿಚಾರವನ್ನು ನಾನೇ ಹೇಳಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದರು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ